**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

ಸೆಷನ್ಸ್ ಕೇಸ್ ನಂಬ್ರ **5/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ| ಜಗದೀಶ್ ಎಸ್ | ಪ್ರಾ.ಸಾಃ 12 |
| ತಂದೆಯ ಹೆಸರು | : | ಗೋಪಾಲಕೃಷ್ಣ ಭಟ್ | ಚಾ.ಸಾಃ 25 |
| ಪ್ರಾಯ | : | 54 ವರ್ಷ | **ದಿನಾಂಕಃ 23.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಮುಲ್ಕಿ | |
| ವಾಸಸ್ಥಳ | : | ಮುಲ್ಕಿ. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಮುಲ್ಕಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಿನಾಂಕಃ 01.09.2016 ರಿಂದ ಇಲ್ಲಿಯವರೆಗೂ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 17.09.2023 ರಂದು ಮಧ್ಯಾಹ್ನ 4.30 ಗಂಟೆ ಸುಮಾರಿಗೆ ಮುಲ್ಕಿ ಪೊಲೀಸು ಠಾಣಾ ಡಬ್ಲ್ಯು.ಪಿ.ಸಿ.3228 ಸ್ವಾತಿ ಯವರು, ಪ್ರಾ.ಸಾ.1ರವರನ್ನು ನಮ್ಮ ಆಸ್ಪತ್ರೆಗೆ ವೈದ್ಯಕೀಯ ತಪಾಸಣೆಗಾಗಿ ಕರೆ ತಂದಿರುತ್ತಾರೆ. ಅದರಂತೆ ಅವರನ್ನು ವಿಚಾರಿಸಲಾಗಿ ಆಕೆಗೆ ಅದೇ ದಿನ ಮಧ್ಯಾಹ್ನ 12.30 ಗಂಟೆ ಸುಮಾರಿಗೆ 4 ಜನ ಅಪರಿಚಿತ ವ್ಯಕ್ತಿಗಳು, ಅವರ ಮನೆಗೆ ನುಗ್ಗಿ ಆಕೆಯ ಕರಿಮಣಿ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದು ತಿಳಿಸಿದರು.

3. ಪ್ರಾ.ಸಾ.1ರವರನ್ನು ಪರೀಕ್ಷಿಸಿ ನೋಡಲಾಗಿ ಆಕೆಯ ಎಡಕಿವಿಯ ಮೇಲೆ 1 ಸೆಂ.ಮೀ. ಉದ್ದದ ತರಚಿದ ಗಾಯ ಇತ್ತು ಮತ್ತು ಕುತ್ತಿಗೆಯ ಮೇಲೆ 3 ಸೆಂ.ಮೀ. ಉದ್ದದ ತರಚಿದ ಗಾಯ ಇತ್ತು. ಸದರಿ ಗಾಯಗಳು ತಾಜಾ ಮತ್ತು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದವು. ಆ ಬಗ್ಗೆ ನಾನು ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.**27** ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.27(ಎ) ಎಂದು ಗುರುತಿಸಲಾಯಿತು.

4. ಹರಿತವಾದ ಚೂರಿಯನ್ನು ಯಾರಾದರೂ ಒತ್ತಿ ಹಿಡಿದಲ್ಲಿ ಶರೀರದ ಆ ಭಾಗಕ್ಕೆ ನಿ.ಪಿ.27ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

<u>ಪಾಟೀ ಸವಾಲುಃ **3** ಮತ್ತು **5**ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದ ಮತ್ತು **1, 2** ಮತ್ತು **6**ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ</u>

5. ಆ ರೀತಿಯ ಗಾಯ ಚೂಪಾಗಿರುವ ಯಾವುದೇ ಮೊನೆಯ ವಸ್ತುವಿನಿಂದ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಪ್ರಾ.ಸಾ.1ರವರು ನನ್ನ ಬಳಿ ಯಾವುದೇ ಗಾಯದ ಹಿನ್ನೆಲೆಯನ್ನು ತಿಳಿಸಿಲ್ಲ ಮತ್ತು ಅವರಿಗೆ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿ.ಪಿ.27ನ್ನು ಈ ಕೇಸಿಗೆ ಅನುಕೂಲವಾಗುವಂತೆ ನೀಡಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.